ತಾಃ 16.03.2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ 1ನೇ ಆರೋಪಿತರ ಪರ ಶ್ರೀ ಎ.ಪಿ.ಎಸ್. ವಕೀಲರಿಂದ ಃ**

ಪೊಲೀಸ್ ಮ್ಯಾನುವಲ್ ಪ್ರಕಾರ ಯಾವುದೇ ಪಂಚನಾಮೆ ಬರೆಯುವಾಗ ಶಿರೋನಾಮೆಯಲ್ಲಿ ಪಂಚಸಾಕ್ಷಿದಾರರ ವಿಳಾಸ ನಮೂದಿಸ ಬೇಕೆನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿ ಪಂಚನಾಮೆಗೆ ಹೆಸರು ವಿಳಾಸ ನಮೂದಿಸಿದರೆ ಸಾಕು ಎಂದು ನುಡಿದಿರುತ್ತಾರೆ. ನಾನು ಪಂಚರಾಗಿ ಬರಲು ಪಂಚಸಾಕ್ಷಿದಾರರಿಗೆ ಲಿಖಿತ ನೋಟಿಸ್ ನೀಡಿರಲಿಲ್ಲ, ಆದರೆ ಮೌಖಿಕವಾಗಿ ಕೋರಿಕೊಂಡಿದ್ದೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳವು ಹಳೆ ನಿಜಗಲ್ ಗ್ರಾಮಕ್ಕೆ ಸೇರಿದಂತಹ ಸ್ಥಳ ಕಂದಾಯ ಜಮೀನಾಗಿರುತ್ತದೆ ಎಂದರೆ ಸರಿ. ಕೃತ್ಯ ನಡೆದಿದೆ ಎನ್ನಲಾದ ಸ್ಥಳವು ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯಾಗಿದ್ದರಿಂದ ನಮ್ಮ ಗಸ್ತು ವಾಹನವು ಸಾಕಷ್ಟು ಬಾರಿ ಗಸ್ತಿಗೆ ತಿರುಗಾಡುತ್ತದೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ಆಗಾಗ ಗಸ್ತು ವಾಹನವು ತಿರುಗಾಡುತ್ತದೆ ಎಂದು ನುಡಿದಿರುತ್ತಾರೆ. ಚಾಸಾ-2 ಮತ್ತು 3ರವರು ಹಳೆ ನಿಜಗಲ್ ಗ್ರಾಮದವರು ಅಲ್ಲ ಎಂದರೆ ಸರಿ. ಕೊಲೆಯಾಗಿದೆ ಎನ್ನುವ ಮಾಹಿತಿ ಬಂದಾಗ ನಾನು ನನ್ನ ಕಛೇರಿಯಲ್ಲಿ ಇದ್ದೆ. ಕೊಲೆಯಾದ ಸ್ಥಳಕ್ಕೆ ನಾನು ಬರುವಷ್ಟರಲ್ಲಿ ನಮ್ಮ ಸಿಬ್ಬಂದಿ ಇದ್ದರು ಹಾಗೂ ಆ ಊರಿನ ಸಾರ್ವಜನಿಕರು ಬಂದಿರಬಹುದು ಎಂದು ನುಡಿಯುತ್ತಾರೆ. ನಿಪಿ-8ರಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ಸರ್ವೆ ನಂಬರ್ ಹಾಗೂ ಅದರ ಮಾಲೀಕರು ಯಾರು ಎಂದು ನಮೂದುಮಾಡಿರುವುದಿಲ್ಲ ಎಂದರೆ ಸರಿ. ಜಮೀನಿನ ಮಾಲೀಕರು ಮಲ್ಲಿಕಾರ್ಜುನ ಎಂದು ಗೊತ್ತಾಯಿತು. ಸದರಿ ಮಲ್ಲಿಕಾರ್ಜುನರವರನ್ನು ಸಾಕ್ಷಿಯಾಗಿ ಪರಿಗಣಿಸಿರುವುದಿಲ್ಲ ಕಾರಣ ಅವರು ಈ ಪ್ರಕರಣದಲ್ಲಿ ಅವಶ್ಯ ಸಾಕ್ಷಿ ಎಂದು ನನಗೆ ಕಂಡು ಬರಲಿಲ್ಲ. ನಾನು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಹೋಗುವಷ್ಟರಲ್ಲಿ ಸದರಿ ವ್ಯಕ್ತಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಗಿತ್ತು.

ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿ ಹಾಗೂ ಲಾರಿ ಕ್ಯಾಬಿನಲ್ಲಿ ರಕ್ತ ಕಲೆಯಾದ ಫೋಟೋಗಳನ್ನು ನಮ್ಮ ಠಾಣಾ ಕ್ಯಾಮರಾದಲ್ಲಿ ತೆಗೆಯಲಾಗಿರುತ್ತದೆ. ಲಾರಿಯ 4 ಆ್ಯಂಗಲ್‌ನಲ್ಲಿ ಫೋಟೋವನ್ನು ತೆಗೆದಿಲ್ಲ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯ ಲಾರಿಯ ಮುಂಭಾಗ ಹಾಗೂ ಟೈರ್‌ಗಳನ್ನು ಬಿಚ್ಚಿರುವ ಭಾಗದ ಫೋಟೋವನ್ನು ತೆಗೆಯಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಪಂಚನಾಮೆಯಲ್ಲಿ ಯಾವ ಕಂಪನಿಯ ಟೈರ್ ಮತ್ತು ಡಿಸ್ಕ್ ಎಂದು ನಮೂದಿಸಿಲ್ಲ ಎಂದರೆ ಸರಿ.

2. ಅಲ್ಲಿ ಚೆಲ್ಲಾಪಿಲ್ಲಿಯಗಿ ಬಿದ್ದಿದ್ದ ಟೂಲ್ಸ್ ಬಾಕ್ಸ್ ತೆರೆದಿದ್ದು ಅದರಲ್ಲಿದ್ದ ಕೆಲವೊಂದು ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ವಸ್ತುಗಳನ್ನು ಮುಂದಿನ ಕ್ರಮಕ್ಕಾಗಿ ಅಮಾನತುಪಡಿಸಿಕೊಂಡಿರುವುದಿಲ್ಲ. ಲಾರಿಯಲ್ಲಿದ್ದ ಟೂಲ್ಸ್ ಬಾಕ್ಸ್‌ನಲ್ಲಿದ್ದ ವಸ್ತುಗಳನ್ನು ಒಂದು ವೇಳೆ ಅಮಾನತುಪಡಿಸಿಕೊಂಡಿದ್ದರೆ ನಿಜವಾದ ಆರೋಪಿತರು ಸಿಕ್ಕಿಹಾಕಿಕೊಳ್ಳುತ್ತಾರೆ ಎನ್ನುವ ಉದ್ದೇಶದಿಂದ ಸದರಿ ಟೂಲ್ಸ್‌ಬಾಕ್ಸ್‌ನಲ್ಲಿದ್ದ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದಿದೆ ಎನ್ನಲಾದ ಸ್ಥಳದಲ್ಲಿ ಫೋಟೋವನ್ನು ತೆಗೆದಿದ್ದು ಅದರ ನೆಗೆಟಿವ್ ಅಥವಾ ಚಿಪ್‌ನ್ನು ಹಾಜರುಪಡಿಸಿದ್ದರೋ ಇಲ್ಲವೋ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ಸದರಿ ಕ್ಯಾಮರಾ ಡಿಜಿಟಲ್ ಕ್ಯಾಮರಾವಾಗಿದ್ದು ಅದರಲ್ಲಿ ತೆಗೆದಿದ್ದ ಫೋಟೋಗಳನ್ನು ಪ್ರಿಂಟ್‌ಔಟ್ ತೆಗೆದುಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ. ಫೋಟೋಗ್ರಾಫಗೆ ಸಂಬಂಧಿಸಿದಂತೆ ಕಲಂ 65(ಬಿ) ಬಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. 2014ರಲ್ಲಿ ಯಾವ ಕಂಪನಿಯ ಡಿಜಿಟಲ್ ಕ್ಯಾಮರಾವನ್ನು ನಮ್ಮ ಠಾಣೆಯಲ್ಲಿ ಉಪಯೋಗ ಮಾಡುತ್ತಿದ್ದೇವು ಎಂದು ನನಗೆ ಈಗ ನೆನಪಿರುವುದಿಲ್ಲ. ಆ ದಿನ ಫೋಟೋ ತೆಗೆದ ಸಿಬ್ಬಂದಿಯ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಆ ದಿನ ಕೃತ್ಯ ನಡೆದಿದ ಎನ್ನಲಾದ ಸ್ಥಳದಲ್ಲಿ ಫೋಟೋ ತೆಗೆದ ಬಗ್ಗೆ ನಿಪಿ-8ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಪಂಚನಾಮೆ ಸಂದರ್ಭದಲ್ಲಿ ಸೀಲ್ ಮಾಡಿದ ಸೀಲ್‌ನ್ನು ಪಂಚರ ಕೈಗೆ ಕೊಟ್ಟಿರುತ್ತೇನೆ. ದಿನಾಂಕ 13.02.2014 ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ನಾನು ಭೇಟಿ ಕೊಟ್ಟಿಲ್ಲ

ಹಾಗೂ ಸದರಿ ಸ್ಥಳದಲ್ಲಿ ನಿಪಿ-8ರಂತೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-8ನ್ನು ಠಾಣೆಯಲ್ಲಿ ತಯಾರು ಮಾಡಿ ಪಂಚರ ಸಹಿಯನ್ನು ಠಾಣೆಯಲ್ಲಿಯೇ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಲಾರಿಯ ಸ್ಟೇರ್ ಡಿಸ್ಕ್ ಮತ್ತು ಟೈರ್ ಅಂಗಡಿಗಳಲ್ಲಿ ಸಿಗುತ್ತವೆ ಆದರೆ ಇವುಗಳು ಅಲ್ಲ ಎಂದು ನುಡಿಯುತ್ತಾರೆ. ಲಾರಿಯ ಮಾಲೀಕರ ಪರವಾಗಿ ಜಿಪಿಎ ಹೋಲ್ಡರ್‌ಗೆ ಲಾರಿಯನ್ನು ಬಿಡುಗಡೆಗೊಳಿಸಿರುತ್ತೇನೆ ಆ ಸಂದರ್ಭದಲ್ಲಿ ಸದರಿಯವರ ಹೇಳಿಕೆಯಲ್ಲಿ ಲಾರಿಯ ಡಿಸ್ಕ್ ಮತ್ತು ಟೈರ್ ಯಾವ ಕಂಪನಿಗೆ ಸೇರಿದ್ದು ಎಂದು ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಪಿ.ಎಫ್‌ನಂ.51/2014ರಲ್ಲಿ ನಮೂದಿಸಿದಂತಹ 2 ಡಿಸ್ಕ್ ಸಮೇತ ಇರುವ ಲಾರಿಯ ಟೈರುಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ.

3. ಆ ದಿನ ನಾನು ಯಾವುದೇ ಸರ್ಕಾರಿ ಆಸ್ಪತ್ರೆಗೆ ಭೇಟಿ ಕೊಟ್ಟಿಲ್ಲ ಹಾಗೂ ಶವತನಿಖಾ ವರದಿಯನ್ನು ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ಶವಪಂಚನಾಮಾ ವರದಿಯ ಸಾಕ್ಷಿದಾರರಾದ ಚಾಸಾ-4 ರಿಂದ 6ರವರಿಗೆ ಲಿಖಿತವಾದ ನೋಟಿಸ್‌ನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಸಾಕ್ಷಿದಾರರು ಯಾವುದೇ ಹೇಳಿಕೆಗಳನ್ನು ನೀಡದೆ ಇದ್ದರು ಸಹ ಈ ಪ್ರಕರಣಗೋಸ್ಕರ ನಾನೇ ಹೇಳಿಕೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಶವದ ಮೈಮೇಲೆ ಇದ್ದ ಬಟ್ಟೆ ಯಾವ ಬ್ರ್ಯಾಂಡ್‌ದು ಎಂದು ನಾನು ನಮೂದಿಸಿರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಸದರಿ ಬಟ್ಟೆಯಲ್ಲಿ ಯಾವುದೇ ಕಂಪನಿಯ ಬ್ರ್ಯಾಂಡ್ ಕಂಡುಬಂದಿರುವುದಿಲ್ಲ ಎಂದು ಮುಂದುವರೆದು ನುಡಿಯುತ್ತಾರೆ. ಆರೋಪಿತರನ್ನು ಈ ಪ್ರಕರಣದಲ್ಲಿ ಪೊಲೀಸ್ ಕಸ್ಟಡಿಗೆ ತಗೆದುಕೊಂಡಾಗ ಆರೋಪಿತರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸ್ವಖುಷಿ ಹೇಳಿಕೆಗಳನ್ನು ನೀಡಿರುವುದಿಲ್ಲ ನಾನೇ ಸ್ವಖುಷಿ ಹೇಳಿಕೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

4. ದೊಡ್ಡಬೆಳವಂಗಲ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 48/2014ರಲ್ಲಿ ಸೃಷ್ಟಿ ಮಾಡಿಕೊಂಡಿರುವ ವಸುತಗಳನ್ನು ಈ ಪ್ರಕರಣದಲ್ಲಿ ಅಳವಡಿಸಿಕೊಂಡು ಠಾಣಾ ಪಿ.ಎಫ್.ನಂತೆ

ಅಳವಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 27.04.2014ರಂದು ಮಾಡಿದ ಅಮಾನತುಪಂಚನಾಮೆಗೆ ಸ್ಥಳೀಯ ಪಂಚರನ್ನು ಪಂಚರಾಗಿ ತೆಗೆದುಕೊಂಡಿಲ್ಲ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿ ನಾವೇ ನಮ್ಮ ಠಾಣೆಯ ವ್ಯಾಪ್ತಿಯಲ್ಲಿ ಬರುವ ಸಾಕ್ಷಿದಾರರನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದೆವು ಎಂದು ಸಾಕ್ಷಿ ಮುಂದುವರೆದು ನುಡಿದಿರುತ್ತಾರೆ. ನಮ್ಮ ಠಾಣೆಯಿಂದ ಮುದಿಗೆರೆ ಗ್ರಾಮಕ್ಕೆ ಠಾಣಾ ಜೀಪಿನಲ್ಲಿ ಹೋಗಿದ್ದೆವು. ಸದರಿ ಸ್ಥಳಕ್ಕೆ ಹೋಗುವ ಮುಂಚೆ ನಮ್ಮ ಠಾಣಾ ಜೀಪಿನಲ್ಲಿ ಏನೇನು ಇದೆ ಎಂದು ಶೋಧನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಅಮಾನತುಪಡಿಸಿಕೊಂಡಂತಹ ಅಪೋಲೋ ಕಂಪನಿಯ 2 ಟೈರ್‌ಗಳಾಗಿರುತ್ತವೆ. ದಿನಾಂಕ 27.04.2014ರಂದು ನಿಪಿ-10ರಲ್ಲಿ ನಮೂದಿಸಿರುವ ಸ್ಥಳಕ್ಕೆ ಭೇಟಿ ನೀಡದೆ ಠಾಣೆಯಲ್ಲಿಯೇ ನಿಪಿ-10ನ್ನು ಸೃಷ್ಟಿ ಮಾಡಿಕೊಂಡು ಪಂಚ ಸಾಕ್ಷಿದಾರರ ಸಹಿಯನ್ನು ಠಾಣೆಯಲ್ಲಿ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-10ರಂತೆ ಪಂಚನಾಮೆ ಅಡಿಯಲ್ಲಿ ಅಮಾನತುಪಡಿಸಿಕೊಂಡ ಸಂದರ್ಭದಲ್ಲಿ ಆರೋಪಿತರು ತೋರಿಸಿದಂತೆ ಫೋಟೋ ತೆಗೆದಿರುವುದಿಲ್ಲ. ನಿಪಿ-12ರಲ್ಲಿ ಕಂಡುಬರುವ ಟೈರ್ ಸಿಇಎಟಿ ಕಂಪನಿಯ ಟೈರುಗಳು ಅವು ಅಪೋಲೋ ಕಂಪನಿಯ ಟೈರುಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ-11 ಮತ್ತು 12ರಲ್ಲಿ ಕಂಡುಬರುವ ಡಿಸ್ಕ್ ಮತ್ತು ಟೈರುಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ದಿನಾಂಕ 25.07.2014ರಂದು ಟಾಟಾ ಫೈನಾನ್ಸ್‌ರವರು ಲಾರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಈ ಪ್ರಕರಣಕ್ಕೋಸ್ಕರ ನಾನೇ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇರದೇ ಇದ್ದರು ಸಹ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ಅಮಾನತುಪಡಿಸಿಕೊಂಡಂತಹ ನೀಲಗಿರಿ ಕಡ್ಡಿಯನ್ನು ಹಾಜರುಪಡಿಸಿಲ್ಲ ಎನ್ನುವ ವಕೀಲರ ಪ್ರಶ್ನೆಗೆ ಹಾಜರುಪಡಿಸಿರುವುದಾಗಿ ಸಾಕ್ಷಿಯು ನುಡಿದಿರುತ್ತಾರೆ. ನಿಪಿ-46ರಿಂದ

50ರಂತೆ 1ರಿಂದ 5 ಆರೋಪಿತರು ಯಾವುದೇ ಸ್ವಖುಷಿ ಹೇಳಿಕೆಯನ್ನು ನನ್ನ ಮುಂದೆ ನೀಡದೆ ಇದ್ದರು ಸಹ ಈ ಪ್ರಕರಣಕೋಸ್ಕರ ನಾನೇ 1ರಿಂದ 5ನೇ ಆರೋಪಿತರ ಸಹಿಗಳನ್ನು ಬಿಳಿ ಹಾಳೆ ಮೇಲೆ ತೆಗೆದುಕೊಂಡು ನಂತರ ಈ ಪ್ರಕರಣಕ್ಕೆ ಅನೂಕೂಲವಾಗಲು 1ರಿಂದ 5ನೇ ಆರೋಪಿತರ ಸ್ವಖುಷಿ ಹೇಳಿಕೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಜವಾದ ಆರೋಪಿಗಳನ್ನು ಪತ್ತೆ ಹಚ್ಚದೆ ಈ ಪ್ರಕರಣದ 1ರಿಂದ 6ನೇ ಆರೋಪಿತರನ್ನು ಸುಳ್ಳು ಸೃಷ್ಟಿ ಮಾಡಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಈ ಮೇಲಿನ ಪಾಟೀ-ಸವಾಲನ್ನು 2, 4 ಮತ್ತು 5ನೇ ಆರೋಪಿತರ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.**

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

C/c. 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.